ಕೃಷ್ಣಮೂರ್ತಿ ಬಿಳಿಗೆರೆ

# ಅಮ್ಮ ಅಮ್ಮ ಆಲ್ನೋಡು

ಅಮ್ಮ ಅಮ್ಮ ಅಲ್ನೋಡು
ದೇವರಿಗೆಂತ ದೀಪದ ಕೋಡು \ಅಮ್ಮ\

ದೇವರ ಮೇಲೆ ಎಷ್ಟೊಂದು ಹೂವು
ದೇವರ ಮುಂದೆ ಎಷ್ಟೊಂದು ಹಣ್ಣು
ಎಷ್ಟೊಂದು ಜನ ಎಷ್ಟೊಂದು ಮೌನ
ಎಲ್ಲರ ಮುಖದಲು ಗೆಲುವಿನ ತನನ
ದೇವರ ಕಡೆಗೆ ಎಲ್ಲರ ಗಮನ \ಅಮ್ಮ\

ಅವರನು ಅವರಲಿ ಕಂಡವರು
ಆಗಲೋ ಈಗಲೋ ಒಳಗಿನ ದೇವರು
ಎದ್ದು ಬಂದರು ಬರಬಹುದು
ಎಂಥ ಸುಂದರ ಮೆರವಣಿಗೆ
ಎಂಥ ವಾದ್ಯದ ಬರವಣಿಗೆ \ಅಮ್ಮ\

ಅಯ್ಯೋ ಅಮ್ಮ ಅಲ್ನೋಡು
ದೇವರ ಕೈಲಿ ಗದೆ ನೋಡು
ದೇವರ ಕೈಲಿ ಕತ್ತಿ ನೋಡು
ಭರ್ಚಿ ತ್ರಿಶೂಲ ಇರೋದು ನೋಡು
ಅಮ್ಮ ಅಮ್ಮ ಓಡು ಓಡು \ಅಮ್ಮ\

ದೇವರ ಕೈಲಿ ಹೂವಿರಬೇಕು
ದೇವರೆ ಹೂವ ಬಿಡಬೇಕು
ದೇವರ ಕೈಲಿ ಹಣ್ಣಿರಬೇಕು
ದೇವರೆ ಹಣ್ಣು ಕೊಡಬೇಕು
ಅಮ್ಮ ಇಂಥ ದೇವರು ಬೇಕು \ಅಮ್ಮ\

